೫. ಪ್ರತಿ ವರ್ಷ ರಸ್ತೆ ಸುರಕ್ಷತಾ ಸಪ್ತಾಹವನ್ನು ಆಚರಿಸಿ, ಈ ಅವಧಿಯಲ್ಲಿ ವಾಹನಗಳ ತಪಾಸಣೆಯನ್ನು ತೀವ್ರಗೊಳಿಸುವುದರ ಜೊತೆಗೆ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ವಾಹನ ಚಾಲಕರಿಗೆ ಸಂಚಾರ ನಿಯಮಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ದೇವನ ಹಳ್ಳಿ ತಾಲ್ಲೂಕು ಮುಖ್ಯ ಸ್ಥಳದಲ್ಲಿ ಚಿಕ್ಕ ಕ್ರೀಡಾಂಗಣ ನಿರ್ಮಾಣ

*೯೯೫. ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ದೇವನಹಳ್ಳಿ ತಾಲ್ಲೂಕು ಮುಖ್ಯ ಸ್ಥಳದಲ್ಲಿ ಯಾವುದಾದರೂ ಚಿಕ್ಕ ಕ್ರೀಡಾಂಗಣ ವಿದೆಯೇ ?

೨) ಇಲ್ಲದಿದ್ದರೆ, ಸರ್ಕಾರವು ದೇವನಹಳ್ಳಿಯಲ್ಲಿ ಚಿಕ್ಕ ಕ್ರೀಡಾಂಗಣ ಕಟ್ಟಲು ಕ್ರಮ ತೆಗೆದು ಕೊಳ್ಳಲಾಗುವುದೇ ?

೩) ಭಾರತ ಸರ್ಕಾರದ ಕ್ರೀಡಾ ಪ್ರಾಧಿಕಾರ ರಾಜ್ಯದಲ್ಲಿ ಕ್ರೀಡಾಂಗಣ ನಿರ್ಮಿಸಲು ಧನಸಹಾಯ ನೀಡುವುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

೧) ಇಲ್ಲ.

೨) ರಾಜ್ಯ ಸರ್ಕಾರವು ತಾನಾಗಿಯೇ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಿಸಲು ಕ್ರಮ ತೆಗೆದುಕೊಳ್ಳುವುದಿಲ್ಲ. ಸ್ಥಳೀಯ ಸಾರ್ವಜನಿಕರು ಸ್ವಯಂಪ್ರೇರಣೆಯಿಂದ ಸಾರ್ವಜನಿಕ ಸಂತಿಕೆಯನ್ನು ಸಂಗ್ರಹಿಸಿ ಧನ ಸಹಾಯ ನೀಡಿದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಧನ ಸಹಾಯ ನೀಡಲಾಗುವುದು.

೩) ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಯುವಜನ ಸಂಯಾಲಯವು "ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಪಂದ್ಯಗಳ ಯೋಜನೆಯಡಿಯಲ್ಲಿ" ರಾಜ್ಯದ ವಿವಿಧ ಭಾಗಗಳಲ್ಲಿ ಕ್ರೀಡಾಂಗಣ ನಿರ್ಮಿಸಲು ಧನ ಸಹಾಯವನ್ನು ಅಂದಾಜು ವೆಚ್ಚದ ಶೇಕಡಾ ೫೦ ರಷ್ಟು ಇಲ್ಲವೇ ೫.೦೦ ಲಕ್ಷ ರೂಗಳಿಗೆ ಮಿತಿಗೊಳಿಸಿ ಯಾವುದು ಕಡಿಮೆಯೋ ಅದಕ್ಕೆ ಧನ ಸಹಾಯ ನೀಡುತ್ತದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು —ಈಗ ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸುವುದು.

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೇ, ನಿನ್ನೆ ಘಟನೆ ಬಗ್ಗೆ ತಾವು ಏನೂ ಹೇಳಲಿಲ್ಲ.

ಅಧ್ಯಕ್ಷರು.—ಅದನ್ನು ಎಕ್ಸ್‌ಪುಂಜ್ ಮಾಡಿದ್ದೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸುವರು.

ಶ್ರೀ ಆರ್. ವಿ. ದೇಶಪಾಂಡೆ (On behalf of Sri S.R. Bommaiah Chief Minister).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಕಾಗದ ಪತ್ರವನ್ನು ಸಭೆಯ ಮುಂದಿಡುತ್ತೇನೆ.—

೧೯೮೫ನೇ ಇಸವಿಯ ಆಡಳಿತ ನ್ಯಾಯ ಮಂಡಳಿ ಶಾಸನದ (೧೯೮೫ನೇ ಇಸವಿಯ ಕೇಂದ್ರ ಶಾಸನದ ಸಂಖ್ಯೆ ೧೩) ೨೭ (೨)ನೇ ಕಲಮಿನ ಮೇರಿಗೆ ೧೯೮೮ನೇ ಸಾಲಿನ ಸೇವಾ ನಿಯಮಗಳ ವರದಿ (ಕರ್ನಾಟಕ ಆಡಳಿತ ನ್ಯಾಯ ಮಂಡಳಿ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ ೯ನೇ ಮಾರ್ಚ್ ೧೯೮೯ರಂದು ಹೊರಡಿಸಲಾದ ಡಿ.ಪಿ.ಎ.ಆರ್ ೨೯ ಎಸ್.ಎ.ಟಿ. ೮೮ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

(ಕಾಂಗ್ರೆಸ್ ಸದಸ್ಯರಾದ ಶ್ರೀ ವಿನಯಕುಮಾರ್ ಸೊರ್ಕೆ, ಶ್ರೀ ಆರ್. ರಾಮಯ್ಯ, ಶ್ರೀ ವಸಂತ ಸಾಲಿಯಾನ್, ಶ್ರೀ ಪಟಪಾಕ್ಕಿ ರತ್ನಾಕರ್, ಶ್ರೀ ಡಿ.ಎ. ಚಿನ್ನಪ್ಪ ಮುಂತಾದವರು ಅಧ್ಯಕ್ಷ